SUNDAY TIMES OF INDIA, MANGALURU
MAY 23, 2021

# Private hospitals to set up more on-site $O_2$ generators

Times News Network

**Manipal:** In view of the Covid-19 pandemic and a possible third wave, a 1,500 LPM plant on-site oxygen generator is being installed on priority at Kasturba Hospital, Manipal, and 500 LPM plant on-site oxygen generator will be set up at KMC Hospital Attavar, Mangaluru, said C G Muthana, regional chief operating officer, KMC Teaching Hospital.

## BOOSTING INFRA

Dr Avinash Shetty, medical superintendent, Kasturba Hospital, Manipal, said that medical oxygen is required for 26 operating theatres (OT) including minor OTs, 250 ICU beds and 900 other beds with two outlets. "This is a 2,032-bed hospital. Due to the current sudden spike in Covid cases, it is observed that daily consumption of liquid medical oxygen (LMO) has increased to 2,200 litres/day from 1,600 litres/day. The hospital has a capacity LMO storage tank of 20,000l, which is replenished twice a week by a cryogenic tanker from Ballari. From this LMO tank, only 15,400l can be used due to technical reasons. This caters to seven days of the requirement. As a backup, there are 121 jumbo cylinders of 7cu m capacity, which are stored at two places in the hospital. These are replenished from Mulki and Kaup," he said.

Dr John T Rampuram, medical superintendent, KMC Hospital, Attavar, Mangaluru, said that this is a 610-bed hospital and requires medical oxygen for 10 OTs, including minor OTs, 44 ICU beds, and 113 other beds with two outlets. "The daily consumption of LMO has increased to 600 l/day from 300 l/day. The hospital has the capacity of an LMO storage tank of 6,000l, which is replenished twice a week by cryogenic tankers. We have a backup of 42 jumbo cylinders," he said.

The 1,500 LPM plant installation requires 400 sq ft area, and the total cost is an approximate Rs 2.5 crore. The 500 LPM plant installation requires a 100 sq ft area, and is estimated to cost of Rs 1.1 crore. This process will be completed in another five months.

DECCAN HERALD
Monday
May 24, 2021

# KMC to install 2 oxygen generation plants

**The plants will be set up in Manipal, Attavara**

MANIPAL, DHNS

CG Muthana, Regional Chief Operating Officer of teaching hospital, Manipal Health Enterprises Pvt Ltd, said, "In view of current Covid-19 pandemic and possible third wave, we are installing 1500 litres per minute (LPM) plant, an on-site oxygen generation, at Kasturba Hospital, Manipal, and 500 LPM plant, an on-site oxygen generation plant, at KMC Hospital in Attavar as a stand by arrangement to cater to any emergency situations."

He said that during the ongoing Covid-19 pandemic short supply of Medical Oxygen is being experienced all over India. Considering this, the current facilities at Kasturba Hospital, Manipal, and KMC Hospital, Attavar, were examined, along with replenishment logistics, to assess the situation.

KMC Medical Superintendent Dr Avinash Shetty said, "Kasturba Hospital, Manipal, is 2032-bed Hospital and Medical Oxygen is required for 26 OTs, including Minor OTs, 250 ICU Beds, 900 other beds. Due to the current sudden spike in Covid cases, it is observed that daily consumption of Liquid Medical Oxygen is 2,200 litres per day which otherwise is 1,600 litres per day during normal days. The hospital is having a capacity of Liquid Medical Oxygen storage tank of 20,000 litres which is replenished twice a week by Cryogenic Tanker from Ballari."

As a backup, there are 121 jumbo cylinders of 7 Cu Mtr capacity, which are stored at two places in the Hospital, he said.

Dr John T Rampure, Medical Superintendent of KMC Hospital-Attavar, said that the KMC Hospital in Attavar is 610-bed Hospital and Medical Oxygen is required for 10 OTs, including Minor OTs, 44 ICU Beds, 113 other beds. At present due to the increase in Covid cases, it is observed that daily consumption of Liquid Medical Oxygen is 600 litres per day which otherwise is 300 litres per day during normal days.

The estimated cost of 1,500 LPM plant is Rs 2.5 crore while that of 500 LPM plant is Rs 1.10 crore.

24-5-2021
UDAYAVANI - MANIPAL

## ಮಣಿಪಾಲ, ಮಂಗಳೂರು ಅತ್ತಾವರ ಆಸ್ಪತ್ರೆ

# ಹೆಚ್ಚುವರಿ ಆನ್‌ಸೈಟ್ ಆಕ್ಸಿಜನ್ ಜನರೇಟರ್ ಸ್ಥಾಪನೆ

### 1,500 ಎಲ್‌ಟಿಎಂ, 500 ಎಲ್‌ಟಿಎಂ ಸಾಮರ್ಥ್ಯದ ಘಟಕ

ಉಡುಪಿ, ಮೇ 23: ವೈದ್ಯಕೀಯ ಆಮ್ಲಜನಕದ ಕೊರತೆಯನ್ನು ದೇಶ ಅನುಭವಿಸುತ್ತಿದೆ. ಕೋವಿಡ್ ಸಾಂಕ್ರಾಮಿಕ ಮತ್ತು ಸಂಭವನೀಯ ಮೂರನೇ ಅಲೆಯನ್ನು ಗಮನದಲ್ಲಿಟ್ಟುಕೊಂಡು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ 1,500 ಎಲ್‌ಟಿಎಂ (ಲೀಟರ್ ಪರ್ ಮಿನಿಟ್) ಮತ್ತು ಮಂಗಳೂರು ಅತ್ತಾವರ ಕೆಎಂಸಿ ಆಸ್ಪತ್ರೆಯಲ್ಲಿ 500 ಎಲ್‌ಟಿಎಂ ಪ್ಲಾಂಟ್ ಆನ್-ಸೈಟ್ ಆಕ್ಸಿಜನ್ ಜನರೇಟರ್ ಸ್ಥಾಪಿಸಲಾಗುತ್ತಿದೆ.

ಇದರಿಂದ ತುರ್ತು ಸಂದರ್ಭಗಳಲ್ಲಿ ಅನಿಯಂತ್ರಿತ ವೈದ್ಯಕೀಯ ಆಕ್ಸಿಜನ್ ಪೂರೈಸಲು ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ಮಣಿಪಾಲದ ಆಸ್ಪತ್ರೆಯಲ್ಲಿನ ಮರುಪೂರಣದ ಲಾಜಿಸ್ಟಿಕ್ ವ್ಯವಸ್ಥೆಯನ್ನು ಪರೀಕ್ಷಿಸಲಾಯಿತು. ಮಣಿಪಾಲ ಮತ್ತು ಅತ್ತಾವರ ಆಸ್ಪತ್ರೆಗಳು ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದರಿಂದ ಬೇಡಿಕೆಯನ್ನು ಆದ್ಯತೆಯ ಮೇಲೆ ನೋಡಿಕೊಳ್ಳುವ ಆವಶ್ಯಕತೆ ಇದೆ ಎಂದು ಆಸ್ಪತ್ರೆಗಳ ಪ್ರಾದೇಶಿಕ ನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ ಅವರು ತಿಳಿಸಿದ್ದಾರೆ.

**ಮಣಿಪಾಲ: 2,200 ಲೀ. ಅಗತ್ಯ**

ಮಣಿಪಾಲ ಆಸ್ಪತ್ರೆಯು 2,032 ಹಾಸಿಗೆಗಳ ಆಸ್ಪತ್ರೆಯಾಗಿದ್ದು ಸಣ್ಣ ಶಸ್ತ್ರಚಿಕಿತ್ಸೆ ಕೊಠಡಿಗಳು ಸೇರಿದಂತೆ 26 ಶಸ್ತ್ರಚಿಕಿತ್ಸೆ ಕೊಠಡಿಗಳು, 250 ಐಸಿಯು ಹಾಸಿಗೆ, 900 ಇತರ ಹಾಸಿಗೆಗಳಿಗೆ ಮತ್ತು ಎರಡು ಅಂಗ ಸಂಸ್ಥೆಗಳಿಗೆ ವೈದ್ಯಕೀಯ ಆಮ್ಲಜನಕ ಪೂರೈಸುತ್ತಿದೆ. ಪ್ರಸ್ತುತ ಹಠಾತ್ ಬೇಡಿಕೆ ಹೆಚ್ಚಳದಿಂದಾಗಿ ಆಮ್ಲಜನಕದ ದೈನಂದಿನ ಬಳಕೆ 2,200 ಲೀ.ಗೆ ಏರಿಕೆಯಾಗಿದೆ. ಇಲ್ಲದಿದ್ದರೆ ಸಾಮಾನ್ಯ ದಿನಗಳಲ್ಲಿ ದೈನಂದಿನ ಬಳಕೆ 1,600 ಲೀ. ಆಗಿರುತ್ತದೆ. ಆಸ್ಪತ್ರೆಯು 20,000 ಲೀ.ಗಳಷ್ಟು ವೈದ್ಯಕೀಯ ಆಮ್ಲಜನಕದ ಶೇಖರಣ ಸಾಮರ್ಥ್ಯದ ಟ್ಯಾಂಕ್ ಹೊಂದಿದೆ. ಇದನ್ನು ವಾರಕ್ಕೆ ಎರಡು ಬಾರಿ ಬಳ್ಳಾರಿಯ ಕ್ರಯೋಜೆನಿಕ್ ಟ್ಯಾಂಕರ್‌ನಿಂದ (ಸುಮಾರು 380 ಕಿ.ಮೀ.) ತರಿಸಲಾಗುತ್ತದೆ.


ಎಲ್‌ಎಂಒ ಟ್ಯಾಂಕ್‌ನ ಒತ್ತಡದ ಕುಸಿತದಿಂದಾಗಿ ಕೇವಲ 15,400 ಲೀ. ಮಾತ್ರ ಬಳಸಬಹುದಾಗಿದೆ. ಇದು ಏಳು ದಿನಗಳ ಆವಶ್ಯಕತೆಗಳನ್ನು ಪೂರೈಸುತ್ತದೆ. ಅಲ್ಲದೆ ಮೀಸಲು ಆಗಿ 7 ಕ್ಯೂ.ಮೀ. ಸಾಮರ್ಥ್ಯದ 121 ಜಂಬೊ ಸಿಲಿಂಡರ್‌ಗಳಿವೆ. ಅವುಗಳನ್ನು ಸ್ಥಳೀಯವಾಗಿ (ಮೂಲ್ಕಿ, ಕಾಪು) ಮರುಪೂರಣ ಮಾಡಲಾಗುತ್ತಿದೆ ಎಂದು ಮಣಿಪಾಲ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ| ಅವಿನಾಶ ಶೆಟ್ಟಿ ತಿಳಿಸಿದ್ದಾರೆ.

**ಅತ್ತಾವರ ಆಸ್ಪತ್ರೆ: 600 ಲೀ. ಅಗತ್ಯ**

ಅತ್ತಾವರ ಆಸ್ಪತ್ರೆ 610 ಹಾಸಿಗೆಗಳನ್ನು ಒಳಗೊಂಡಿದೆ. ಸಣ್ಣ ಶಸ್ತ್ರಚಿಕಿತ್ಸೆ ಕೊಠಡಿ ಸೇರಿದಂತೆ 10 ಶಸ್ತ್ರ ಚಿಕಿತ್ಸೆ ಕೊಠಡಿಗಳು, 44 ಐಸಿಯು ಹಾಸಿಗೆಗಳು, 113 ಇತರ ಹಾಸಿಗೆಗಳಿಗೆ ಮತ್ತು ಎರಡು ಅಂಗಸಂಸ್ಥೆಗಳಿಗೆ ವೈದ್ಯಕೀಯ ಆಮ್ಲಜನಕ ಪೂರೈಕೆಯಾಗುತ್ತಿದೆ. ಸಾಮಾನ್ಯ ದಿನಗಳಲ್ಲಿ ದಿನಕ್ಕೆ 300 ಲೀ. ಆಮ್ಲಜನಕ ಸಾಕಾಗುತ್ತದೆ. ಆದರೆ ಈಗ ದಿನಕ್ಕೆ 600 ಲೀ. ಅವಶ್ಯವಿದೆ.

ಆಸ್ಪತ್ರೆಯು 6,000 ಲೀ. ಎಲ್‌ಎಂಒ ಸಾಮರ್ಥ್ಯದ ಶೇಖರಣಾ ಟ್ಯಾಂಕ್ ಹೊಂದಿದೆ. ಇದನ್ನು ವಾರಕ್ಕೆ ಎರಡು ಬಾರಿ ಮರುಪೂರಣಗೊಳಿಸಲಾಗುತ್ತಿದೆ. 42 ಜಂಬೋ ಸಿಲಿಂಡರ್ ಮೀಸಲು ಇದೆ ಎಂದು ವೈದ್ಯಕೀಯ ಅಧೀಕ್ಷಕ ಡಾ| ಜಾನ್ ಟಿ. ರಾಮ್‌ಪುರೆ ಅವರು ತಿಳಿಸಿದರು.

### 3.6 ಕೋ.ರೂ. ವೆಚ್ಚ


ಸಾಂದರ್ಭಿಕ ಚಿತ್ರ

1,500 ಎಲ್‌ಪಿಎಂ ಸ್ಥಾವರ ಸ್ಥಾಪನೆಗೆ 400 ಚದರ ಅಡಿ ಜಾಗ ಅಗತ್ಯ. ಇದಕ್ಕಾಗಿ ಅಸ್ತಿತ್ವದಲ್ಲಿರುವ ಸಿಲಿಂಡರ್ ಶೇಖರಣೆ ಪ್ರದೇಶದ ಪಕ್ಕದಲ್ಲಿಯೇ ಜಾಗ ಗುರುತಿಸಲಾಗಿದೆ. ಪ್ಲಾಂಟ್ ವೆಚ್ಚ ಮತ್ತು ಸಂಬಂಧಿತ ಸಿವಿಲ್ ವರ್ಕ್ಸ್, ಎಲೆಕ್ಟ್ರಿಕಲ್ ಪ್ಯಾನಲ್ ವರ್ಕ್, ಇತರ ವೆಚ್ಚಗಳು ಸೇರಿದಂತೆ ಒಟ್ಟು 2.5 ಕೋ.ರೂ. ವೆಚ್ಚ ಆಗಲಿದೆ. 500 ಎಲ್‌ಪಿಎಂ ಸ್ಥಾವರ ಸ್ಥಾಪನೆಗೆ 100 ಚದರ ಅಡಿ ಬೇಕಾಗುತ್ತದೆ. ಪ್ಲಾಂಟ್ ವೆಚ್ಚ ಮತ್ತು ಸಂಬಂಧಿತ ಸಿವಿಲ್ ವರ್ಕ್ಸ್, ಎಲೆಕ್ಟ್ರಿಕಲ್ ಪ್ಯಾನಲ್ ವರ್ಕ್ ಇತ್ಯಾದಿಗಳಿಗೆ 1.10 ಕೋ.ರೂ. ವೆಚ್ಚ ಆಗಲಿದೆ.

### ಮೂಲಸೌಕರ್ಯಕ್ಕೆ ಆದ್ಯತೆ

**ಮಾಹೆ ಮಣಿಪಾಲವು ಯಾವಾಗಲೂ ಮೂಲಸೌಕರ್ಯಗಳನ್ನು ಕಲ್ಪಿಸುವಲ್ಲಿ ಮತ್ತು ಸಮಾಜಕ್ಕೆ ಸೇವೆ ಒದಗಿಸುವಲ್ಲಿ ಮುಂಚೂಣಿಯಲ್ಲಿದೆ. ಈ ಸಾಂಕ್ರಾಮಿಕ ರೋಗದ ಕಾಲದಲ್ಲಿಯೂ ಉತ್ತಮ ಆರೈಕೆಯನ್ನು ಒದಗಿಸಲು ತನ್ನದೇ ಆದ ಆಮ್ಲಜನಕ ಜನರೇಟರ್ ಸ್ಥಾಪಿಸಲು ಮುಂದಾಗಿದೆ ಎಂದು ಆಡಳಿತ ಮಂಡಳಿ ಹೇಳಿದೆ.**

**SAMYUKTHA KARNATAKA**

**MAY 23, 2021**

# ಮಣಿಪಾಲ, ಅತ್ತಾವರ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಘಟಕ ಸ್ಥಾಪನೆ

ಸಂ.ಕ. ಸಮಾಚಾರ, ಉಡುಪಿ

ಉಡುಪಿ ಹಾಗೂ ದ.ಕ. ಜಿಲ್ಲೆಗಳಲ್ಲಿ ಈಚಿನ ದಿನಗಳಲ್ಲಿ ಕೋವಿಡ್ ಸೋಂಕಿತರು ಹಾಗೂ ಆಮ್ಲಜನಕ ಅಪೇಕ್ಷಿತರ ಸಂಖ್ಯೆ ಹೆಚ್ಚುತ್ತಿರುವುದನ್ನು ಮನಗಂಡು ಮಣಿಪಾಲ ಕೆಎಂಸಿ ಮತ್ತು ಮಂಗಳೂರಿನ ಅತ್ತಾವರ ಕೆಎಂಸಿ ಆಸ್ಪತ್ರೆಗಳಲ್ಲಿ ತಲಾ 1,500 ಮತ್ತು 500 ಎಲ್.ಟಿ.ಎಂ ಸಾಮರ್ಥ್ಯದ ಆಮ್ಲಜನಕ ಘಟಕ ನಿರ್ಮಿಸುತ್ತಿರುವುದಾಗಿ ಮಣಿಪಾಲ ಕೆಎಂಸಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ ಶೆಟ್ಟಿ ಹಾಗೂ ಅತ್ತಾವರ ಕೆಎಂಸಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಜಾನ್ ಟಿ. ರಾಮಪುರೆ ಸಂಯುಕ್ತ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಣಿಪಾಲ ಕೆಎಂಸಿ ಆಸ್ಪತ್ರೆ 2,032 ಹಾಸಿಗೆಗಳ ಆಸ್ಪತ್ರೆಯಾಗಿದ್ದು, ಸಣ್ಣ ಶಸ್ತ್ರಚಿಕಿತ್ಸಾ ಕೊಠಡಿ ಸೇರಿದಂತೆ 26 ಶಸ್ತ್ರಚಿಕಿತ್ಸಾ ಕೊಠಡಿ, 250 ಐಸಿಯು ಹಾಸಿಗೆ, 900 ಇತರ ಹಾಸಿಗೆ ಮತ್ತು ಎರಡು ಅಂಗಸಂಸ್ಥೆಗಳಿಗೆ ವೈದ್ಯಕೀಯ ಆಮ್ಲಜನಕ ಪೂರೈಸುತ್ತಿದೆ. ಪ್ರಸ್ತುತ ಆಮ್ಲಜನಕದ ದೈನಂದಿನ ಬಳಕೆ 2,200 ಲೀ.ಗೆ ಹೆಚ್ಚಳವಾಗಿದೆ. ಆಸ್ಪತ್ರೆ 20 ಸಾವಿರ ಲೀ.ನಷ್ಟು ವೈದ್ಯಕೀಯ ಆಮ್ಲಜನಕದ ಶೇಖರಣಾ ಟ್ಯಾಂಕ್ ಸಾಮರ್ಥ್ಯ ಹೊಂದಿದೆ. ಅದನ್ನು ವಾರಕ್ಕೆರಡು ಬಾರಿ ಬಳ್ಳಾರಿಯ ಕ್ರಯೋಜೆನಿಕ್ ಟ್ಯಾಂಕರ್(ಸುಮಾರು 380 ಕಿ.ಮೀ.)ನಿಂದ ತರಿಸಲಾಗುತ್ತದೆ. ಎಲ್ಎಂಒ ಟ್ಯಾಂಕ್‌ನ ಒತ್ತಡದ ಕುಸಿತದಿಂದಾಗಿ ಕೇವಲ 15,400 ಲೀ.ನಷ್ಟು ಮಾತ್ರ ಬಳಸಬಹುದಾಗಿದ್ದು, ಅದು 7 ದಿನಗಳ ಆವಶ್ಯಕತೆ ಪೂರೈಸುತ್ತದೆ. ಹೆಚ್ಚುವರಿಯಾಗಿ 7 ಕ್ಯೂ. ಮೀ. ಸಾಮರ್ಥ್ಯದ 121 ಜಂಬೊ ಸಿಲಿಂಡರ್ ಇದೆ ಎಂದು ಡಾ. ಅವಿನಾಶ ಶೆಟ್ಟಿ ತಿಳಿಸಿದ್ದಾರೆ.

ಮಂಗಳೂರಿನ ಅತ್ತಾವರ ಕೆಎಂಸಿ ಆಸ್ಪತ್ರೆ 610 ಹಾಸಿಗೆಗಳ ಆಸ್ಪತ್ರೆಯಾಗಿದ್ದು, ಸಣ್ಣ ಶಸ್ತ್ರಚಿಕಿತ್ಸಾ ಕೊಠಡಿ ಸೇರಿದಂತೆ 10 ಶಸ್ತ್ರಚಿಕಿತ್ಸಾ ಕೊಠಡಿ, 44 ಐಸಿಯು ಹಾಸಿಗೆ, 113 ಇತರ ಹಾಸಿಗೆ ಮತ್ತು ಎರಡು ಅಂಗಸಂಸ್ಥೆಗಳಿಗೆ ವೈದ್ಯಕೀಯ ಆಮ್ಲಜನಕ ಪೂರೈಕೆಯಾಗುತ್ತಿದೆ. ಪ್ರಸ್ತುತ ದಿನನಿತ್ಯದ ಆಮ್ಲಜನಕದ ಬಳಕೆ 600 ಲೀ. ಅವಶ್ಯವಿದೆ. ಆಸ್ಪತ್ರೆ 6 ಸಾವಿರ ಲೀ. ಎಲ್ಎಂಒ ಶೇಖರಣಾ ಟ್ಯಾಂಕ್ ಸಾಮರ್ಥ್ಯ ಹೊಂದಿದ್ದು ವಾರಕ್ಕೆರಡು ಬಾರಿ ಕ್ರಯೋಜೆನಿಕ್ ಟ್ಯಾಂಕರ್ ಮರುಪೂರಣಗೊಳಿಸುತ್ತಿವೆ. 42 ಜಂಬೋ ಸಿಲಿಂಡರ್‌ಗಳ ಹೆಚ್ಚುವರಿ ವ್ಯವಸ್ಥೆ ಇದೆ ಡಾ. ಜಾನ್ ಟಿ. ರಾಮ್‌ಪುರೆ ತಿಳಿಸಿದ್ದಾರೆ.

ಎರಡೂ ಘಟಕಗಳ ಒಟ್ಟು ವೆಚ್ಚ 1.10 ಕೋ. ರೂ. ಆಗಲಿದ್ದು, ಮುಂದಿನ 4- 5 ತಿಂಗಳಲ್ಲಿ ಸಿದ್ಧಗೊಳ್ಳಲಿದೆ ಎಂದರು.

ಕನ್ನಡಪ್ರಭ
ಭಾನುವಾರ 23.5.2021

# ಮಣಿಪಾಲ, ಅತ್ತಾವರ ಕೆಎಂಸಿ ಆಸ್ಪತ್ರೆಗಳಲ್ಲಿ ನಿಮಿಷಕ್ಕೆ 2000 ಲೀ. ಆಕ್ಸಿಜನ್ ಉತ್ಪಾದನೆ

**ಮಣಿಪಾಲ:** ಕೋವಿಡ್ 2ನೇ ಮತ್ತು 3ನೇ ಅಲೆಗಳನ್ನು ಗಮನದಲ್ಲಿಟ್ಟುಕೊಂಡು, ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಮತ್ತು ಅತ್ತಾವರದ ಕಸ್ತೂರ್ಬಾ ಆಸ್ಪತ್ರೆಗಳಲ್ಲಿ ಸ್ವಂತ ಆನ್ ಸೈಟ್ ಆಕ್ಸಿಜನ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಮಣಿಪಾಲದ ಘಟಕವು ನಿಮಿಷಕ್ಕೆ 1500 ಲೀ. ಮತ್ತು ಅತ್ತಾವರ ಘಟಕವು ನಿಮಿಷಕ್ಕೆ 500 ಲೀ. ಆಕ್ಸಿಜನ್ ಉತ್ಪಾದಿಸುವ ಸಾಮರ್ಥ್ಯ ಹೊಂದಿವೆ. ಪ್ರಸುತ ಮಣಿಪಾಲದಲ್ಲಿ 20,000 ಲೀ. ಮತ್ತು ಅತ್ತಾವರದಲ್ಲಿ 1600 ಲೀಟರ್‌ಗಳ ಆಕ್ಸಿಜನ್ ಶೇಖರಣಾ ಘಟಕಗಳಿದ್ದು, ಬಳ್ಳಾರಿಯಿಂದ ಆಕ್ಸಿಜನ್ ತರಿಸಿ ತುಂಬಿಸಲಾಗುತ್ತಿದೆ. ಮಣಿಪಾಲದಲ್ಲಿ 121 ಮತ್ತು ಅತ್ತಾವರದಲ್ಲಿ 42 ಜಂಬೋ ಸಿಲಿಂಡರ್‌ಗಳನ್ನೂ ಕಾದಿರಿಸಲಾಗುತ್ತಿದೆ. ಮಣಿಪಾಲದಲ್ಲಿ ಪ್ರತಿದಿನ ಬಳಕೆಯಾಗುತ್ತಿದ್ದ 1600 ಲೀ. ಆಕ್ಸಿಜನ್ ಪ್ರಸ್ತುತ ಕೋವಿಡ್‌ನಿಂದಾಗಿ 2200 ಲೀ.ಗೆ ಏರಿದೆ. ಅತ್ತಾವರದಲ್ಲಿ 300 ಲೀ.ನಿಂದ 600 ಲೀ.ಗೆ ಬೇಡಿಕೆ ಹೆಚ್ಚಾಗಿದೆ. ಮಣಿಪಾಲದ ಘಟಕಕ್ಕೆ 2.50 ಕೋಟಿ ರು. ಮತ್ತು ಅತ್ತಾವರದ ಘಟಕಕ್ಕೆ 1.10 ಕೋಟಿ ರು. ವೆಚ್ಚವಾಗಲಿದೆ. 4 ತಿಂಗಳಲ್ಲಿ ನಿರ್ಮಾಣ ಕಾರ್ಯವು ಪೂರ್ಣಗೊಳ್ಳಲಿದ್ದು, ಮುಂದೆ ಯಾವುದೇ ಅಡೆತಡೆ ಇಲ್ಲದೇ ರೋಗಿಗಳಿಗೆ ಆದ್ಯತೆಯಲ್ಲಿ ವೈದ್ಯಕೀಯ ಆಕ್ಸಿಜನ್ ಪೂರೈಕೆ ಸಾಧ್ಯವಾಗಲಿದೆ ಎಂದು ಮಣಿಪಾಲ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ಮತ್ತು ಅತ್ತಾವರ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಜಾನ್ ಟಿ. ರಾಮಪುರಂ ತಿಳಿಸಿದ್ದಾರೆ.

ವಿಜಯವಾಣಿ

ಸೋಮವಾರ 24 ಮೇ 2021
24 MAY 2021

# ಕೆಎಂಸಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಘಟಕ ಸ್ಥಾಪನೆ

» ಮಣಿಪಾಲ, ಮಂಗಳೂರಿನಲ್ಲಿ ಪೂರೈಕೆಗೆ ಅನುಕೂಲ

ಉಡುಪಿ: ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ 1500 ಎಲ್‌ಪಿಎಂ ಪ್ಲಾಂಟ್ ಆನ್ ಸೈಟ್ ಆಕ್ಸಿಜನ್ ಜನರೇಟರ್ ಮತ್ತು ಅತ್ತಾವರ ಕೆಎಂಸಿ ಆಸ್ಪತ್ರೆಯಲ್ಲಿ 500 ಎಲ್‌ಪಿಎಂ ಪ್ಲಾಂಟ್ ಆನ್-ಸೈಟ್ ಆಕ್ಸಿಜನ್ ಜನರೇಟರ್ ಘಟಕ ಸ್ಥಾಪಿಸಲಾಗಿದೆ. ಇದರಿಂದ ತುರ್ತು ಸಂದರ್ಭ ಅಡೆತಡೆ ಇಲ್ಲದೆ ವೈದ್ಯಕೀಯ ಆಕ್ಸಿಜನ್ ಪೂರೈಸಲು ಸಾಧ್ಯವಾಗಲಿದೆ ಎಂದು ಕೆಎಂಸಿ ಮೆಡಿಕಲ್ ಕಾಲೇಜಿನ ಪ್ರಾದೇಶಿಕ ನಿರ್ವಹಣಾಧಿಕಾರಿ ಸಿ.ಜಿ.ಮುತನ ತಿಳಿಸಿದ್ದಾರೆ.

1500 ಎಲ್‌ಪಿಎಂ ಸ್ಥಾವರ ಸ್ಥಾಪನೆಗೆ 400 ಚದರ ಅಡಿ ಜಾಗದ ಅಗತ್ಯವಿದ್ದು, ಒಟ್ಟು 2.5 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆಯಲಿದೆ. 500 ಎಲ್‌ಪಿಎಂ ಸ್ಥಾವರ ಸ್ಥಾಪನೆಗೆ 100 ಚದರ ಅಡಿ ವಿಸ್ತೀರ್ಣ ಬೇಕಾಗಿದ್ದು, ಒಟ್ಟು 1.10 ಕೋಟಿ ರೂ. ವ್ಯಯವಾಗಲಿದೆ. 4-5 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದಾರೆ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ 2032 ಹಾಸಿಗೆಗಳಿದ್ದು, ಸಣ್ಣ ಶಸ್ತ್ರ ಚಿಕಿತ್ಸಾ ಕೊಠಡಿ ಸೇರಿದಂತೆ 26 ಶಸ್ತ್ರಚಿಕಿತ್ಸಾ ಕೊಠಡಿಗಳಿವೆ. 250 ಐಸಿಯು ಹಾಸಿಗೆ, ಇದೆ. 121 ಜಂಬೊ ಸಿಲಿಂಡರ್‌ಗಳನ್ನು ತುರ್ತು ಅಗತ್ಯಕ್ಕೆ ಮೀಸಲಿಡಲಾಗಿದೆ ಎಂದು ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ ತಿಳಿಸಿದ್ದಾರೆ.

ಮಂಗಳೂರಿನ ಕೆಎಂಸಿ ಆಸ್ಪತ್ರೆಯಲ್ಲಿ 610 ಹಾಸಿಗೆಗಳಿದ್ದು, ಸಣ್ಣ ಶಸ್ತ್ರ ಚಿಕಿತ್ಸಾ ಕೊಠಡಿ ಸೇರಿದಂತೆ 10 ಶಸ್ತ್ರ ಚಿಕಿತ್ಸಾ ಕೊಠಡಿ, 44 ಐಸಿಯು ಹಾಸಿಗೆ, 113 ಇತರ ಹಾಸಿಗೆಗಳಿಗೆ ಮತ್ತು ಎರಡು ಅಂಗ ಸಂಸ್ಥೆಗಳಿಗೆ ವೈದ್ಯಕೀಯ ಆಮ್ಲಜನಕ ಪೂರೈಕೆಯಾಗುತ್ತಿದೆ. ಸಾಮಾನ್ಯ ದಿನಗಳಲ್ಲಿ ದಿನಕ್ಕೆ 300 ಲೀಟರ್ ಆಮ್ಲಜನಕ ಬೇಡಿಕೆ ಪ್ರಸ್ತುತ 600 ಲೀಟರ್‌ಗೆ ಏರಿಕೆಯಾಗಿದೆ. ಆಸ್ಪತ್ರೆಯು 6000 ಲೀಟರ್ ಎಲ್‌ಎಂಒ ಶೇಖರಣಾ ಟ್ಯಾಂಕ್ ಸಾಮರ್ಥ್ಯವನ್ನು ಹೊಂದಿದ್ದು, ವಾರಕ್ಕೆ ಎರಡು ಬಾರಿ ಕ್ರಯೋಜೆನಿಕ್ ಟ್ಯಾಂಕರ್ ಮೂಲಕ ಮರುಪೂರಣಗೊಳಿಸಲಾಗುತ್ತಿದೆ. 42 ಜಂಬೋ ಸಿಲಿಂಡರ್ ಮೀಸಲು ವ್ಯವಸ್ಥೆ ಇದೆ ಎಂದು ಕೆಎಂಸಿ ಅತ್ತಾವರ ವೈದ್ಯಕೀಯ ಅಧೀಕ್ಷಕ ಡಾ.ಜಾನ್‌ಟಿ.ರಾಮ್‌ಪುರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜಯ ಕರ್ನಾಟಕ

ಭಾನುವಾರ,23 ಮೇ 2021

# ಮಣಿಪಾಲ ಕೆಎಂಸಿಯಲ್ಲಿ ಆನ್‌ಸೈಟ್ ಆಕ್ಸಿಜನ್ ಜನರೇಟರ್ ಅಳವಡಿಕೆ

**ಉಡುಪಿ:** ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಕೋವಿಡ್ ಸಾಂಕ್ರಾಮಿಕ ಮತ್ತು ಸಂಭವನೀಯ ಮೂರನೇ ಅಲೆಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚುವರಿಯಾಗಿ ಮತ್ತೊಂದು ಆನ್-ಸೈಟ್ ಆಕ್ಸಿಜನ್ ಜನರೇಟರ್‌ಗಳನ್ನು ಅಳವಡಿಸಲಾಗಿದೆ.

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ 1500 ಎಲ್ಪಿಎಂ ಪ್ಲಾಂಟ್ ಆನ್-ಸೈಟ್ ಆಕ್ಸಿಜನ್ ಜನರೇಟರ್ ಸ್ಥಾಪಿಸಲಾಗುತ್ತಿದೆ. ಇದರಿಂದ ತುರ್ತು ಸಂದರ್ಭಗಳಲ್ಲಿ ಯಾವುದೇ ಅಡೆತಡೆಯಿಲ್ಲದೆ ವೈದ್ಯಕೀಯ ಆಕ್ಸಿಜನ್ ಪೂರೈಸಲು ಸಾಧ್ಯವಾಗಲಿದೆ ಎಂದು ಬೋಧನಾ ಆಸ್ಪತ್ರೆಗಳ ಪ್ರಾದೇಶಿಕ ನಿರ್ವಹಣಾಧಿಕಾರಿ ಸಿ.ಜಿ. ಮುತ್ತಣ್ಣ ತಿಳಿಸಿದ್ದಾರೆ.

ಮಣಿಪಾಲದ ಆಸ್ಪತ್ರೆಯು 20,000 ಲೀಟರ್‌ಗಳಷ್ಟು ವೈದ್ಯಕೀಯ ಆಮ್ಲಜನಕದ ಶೇಖರಣಾ ಟ್ಯಾಂಕ್ ಸಾಮರ್ಥ್ಯವನ್ನು ಹೊಂದಿದೆ. ಇದನ್ನು ವಾರಕ್ಕೆ ಎರಡು ಬಾರಿ ಬಳ್ಳಾರಿಯ ಕ್ರಯೋಜೆನಿಕ್ ಟ್ಯಾಂಕರ್ (ಸುಮಾರು 380 ಕಿ.ಮೀ.) ನಿಂದ ತರಿಸಲಾಗುತ್ತದೆ. ಎಲ್‌ಎಂಒ ಟ್ಯಾಂಕ್‌ನ ಒತ್ತಡದ ಕುಸಿತದಿಂದಾಗಿ ಕೇವಲ 15,400 ಲೀಟರ್‌ಗಳನ್ನು ಮಾತ್ರ ಬಳಸಬಹುದಾಗಿದೆ. ಇದು ಏಳು ದಿನಗಳ ಅವಶ್ಯಕತೆಗಳನ್ನು ಪೂರೈಸುತ್ತದೆ. ಅಲ್ಲದೇ ಮೀಸಲು ಆಗಿ 7 ಸಿಯು ಎಂಟಿಆರ್ ಸಾಮರ್ಥ್ಯದ 121 ಜಂಬೊ ಸಿಲಿಂಡರ್‌ಗಳಿವೆ. ಇವುಗಳನ್ನು ಆಸ್ಪತ್ರೆಯಲ್ಲಿ ಎರಡು ಸ್ಥಳಗಳಲ್ಲಿ ಸಂಗ್ರಹಿಸಲಾಗಿದೆ. ಇವುಗಳನ್ನು ಹತ್ತಿರದ ಸ್ಥಳಗಳಿಂದ (ಮೂಲ್ಕಿ ಮತ್ತು ಕಾಪು ) ಪುನಃ ತುಂಬಿಸಲಾಗುತ್ತಿದೆ ಎಂದು ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ ಶೆಟ್ಟಿ ತಿಳಿಸಿದ್ದಾರೆ.